ವಿಜಯವಾಣಿ

# ಸುದ್ದಿ ಕಾರ್ನರ್

M/s PSI Ganesh Marketin
M/s SVS Enterprises
M/s Amrut Minerals

## ಡಿಜಿಪಿ ನೀಲಮಣಿ ಎನ್. ರಾಜು ವರ್ಗಾವಣೆ ಬಗ್ಗೆ ಗಾಳಿಸುದ್ದಿ



ಬೆಂಗಳೂರು: ಪಶ್ಚಿಮ ಬಂಗಾಳ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಭದ್ರತಾ ವೈಫಲ್ಯ ಪ್ರಕರಣ ಸಂಬಂಧ ಪೊಲೀಸ್ ಮಹಾ ನಿರ್ದೇಶಕರ ತಲೆದಂಡವಾಗಲಿದೆ ಎಂಬ ಸುದ್ದಿ ಹರಿದಾಡಿದೆ. ಬುಧವಾರ ಪ್ರಮಾಣ ವಚನ ಕಾರ್ಯಕ್ರಮಕ್ಕಾಗಿ ಆಗಮಿಸಿದ್ದ ಮಮತಾ ಬ್ಯಾನರ್ಜಿ ಸಂಚಾರ ದಟ್ಟಣೆಯಲ್ಲಿ ಸಿಕ್ಕಿಕೊಂಡಿದ್ದರು. ಬಳಿಕ ನಡೆದು ಬಂದು ವೇದಿಕೆ ಏರಿದ್ದರು. ಈ ಸಂಬಂಧ ಜೆಡಿಎಸ್ ವರಿಷ್ಠ ದೇವೇಗೌಡ ಹಾಗೂ ಕುಮಾರಸ್ವಾಮಿ ಅವರಲ್ಲಿ ಅಸಮಾಧಾನ ವ್ಯಕ್ತಪಡಿಸಿದ್ದರು. ಈ ವಿಚಾರ ರಾಷ್ಟ್ರಮಟ್ಟದಲ್ಲೂ ಸುದ್ದಿಯಾಗಿತ್ತು. ಗುರುವಾರ ಬೆಳಗ್ಗೆ ನಡೆದ ಸಭೆಯಲ್ಲಿ ಸಿಎಂ ಕುಮಾರಸ್ವಾಮಿ ಘಟನೆ ಬಗ್ಗೆ ಮಾಹಿತಿ ಪಡೆದುಕೊಂಡಿದ್ದರು. ಇದರ ಬೆನ್ನಲ್ಲೇ ನೀಲಮಣಿ ಎನ್ ರಾಜು ಅವರನ್ನು ವರ್ಗಾಯಿಸಲಾಗುತ್ತದೆ ಎಂಬ ಸುದ್ದಿ ದಟ್ಟವಾಗಿ ಹರಿದಾಡಿದೆ. ವಾಸ್ತವವಾಗಿ ಪೊಲೀಸ್ ಮಹಾನಿರ್ದೇಶಕರಾದವರನ್ನು ವರ್ಗಾಯಿಸಲು ಬರುವುದಿಲ್ಲ. ಅವರೇ ಸ್ವ ಇಚ್ಛೆಯಿಂದ ಕೇಂದ್ರ ಸೇವೆಗೆ ತೆರಳಬಹುದು.

## ಅನಧಿಕೃತ ನೀರಿನ ಘಟಕಗಳ ಮೇಲೆ ದಾಳಿ

ಬೆಂಗಳೂರು: ನಗರದ ಅನಧಿಕೃತ ನೀರಿನ ಘಟಕಗಳ ಮೇಲ ದಾಳಿ ನಡೆಸಿದ ಬ್ಯೂರೋ ಆಫ್ ಇಂಡಿಯನ್ ಸ್ಟ್ಯಾಂಡರ್ಡ್ (ಬಿಐಎಸ್) ಬೆಂಗಳೂರು ಶಾಖೆ ಅಪಾರ ಪ್ರಮಾಣದ ನೀರಿನ ಕ್ಯಾನ್‌ಗಳನ್ನು ವಶಪಡಿಸಿಕೊಂಡಿದೆ. ಶ್ರೀಗಂಧಕಾವಲ್‌ನಲ್ಲಿರುವ ಎಂ.ಎಂ.ನ್ಯೂ ನಂದಿನಿ ಮತ್ತು ಅಕ್ವಲೈನ್ ಕಂಪನಿ ಐಎಸ್‌ಐ ಚಿಹ್ನೆ ಇಲ್ಲದೆ ಮತ್ತು ಬಿಎಸ್‌ಐ ಪ್ರಮಾಣ ಪತ್ರ ಅವಧಿ ಮುಗಿದಿದ್ದರೂ ಕುಡಿಯುವ ನೀರಿನ ಕ್ಯಾನ್‌ಗಳನ್ನು ತಯಾರಿಸುತ್ತಿತ್ತು. ಖಚಿತ ಮಾಹಿತಿ ಆಧರಿಸಿ ದಾಳಿ ಮಾಡಿದ ಬಿಐಎಸ್ ಅಧಿಕಾರಿಗಳು ನಕಲಿ ಕ್ಯಾನ್‌ಗಳನ್ನು ಜಪ್ತಿ ಮಾಡಿ ಕ್ರಿಮಿನಲ್ ಪ್ರಕರಣ ದಾಖಲಿಸಿದಾರೆ.

Bengaluru Edition
25 May, 2018 Page No. 5
Powered by : erelego.com

Vijaykarnataka Daily News dt 20180526.jpg

# ಬ್ರ್ಯಾಂಡ್ ಹೆಸರಿನಲ್ಲಿ ಕಳಪೆ ನೀರು ಮಾರಾಟ: ದಾಳಿ

**ಬೆಂಗಳೂರು:** ಐಎಸ್‌ಐ ಮಾರ್ಕ್ ಇಲ್ಲದೆ ಅಕ್ವಾಲೈನ್ ಮತ್ತು ಅಕ್ವಾ ಸೆಂಟ್ ಹೆಸರಿನಲ್ಲಿ ನೀರನ್ನು ಮಾರಾಟ ಮಾಡುತ್ತಿದ್ದ ಮೂವರು ಸಂಸ್ಥೆಗಳ ಮೇಲೆ ದಾಳಿ ಮಾಡಿದ ಕೇಂದ್ರ ಬ್ಯೂರೋ ಆಫ್ ಇಂಡಿಯನ್ ಸ್ಟಾಂಡರ್ಡ್ಸ್ ಸಂಸ್ಥೆ ಅಧಿಕಾರಿಗಳು 20 ಲೀಟರ್ ಜಾರ್‌ಗಳಲ್ಲಿ ಸಂಗ್ರಹಿಸಿಟ್ಟಿದ್ದ ನೀರಿನ ಕ್ಯಾನ್‌ಗಳನ್ನು ವಶಪಡಿಸಿಕೊಂಡು ಹಲವರ ವಿರುದ್ಧ ಪ್ರಕರಣ ದಾಖಲಿಸಿದೆ.

ಲಗ್ಗೆರೆ ಮುಖ್ಯ ರಸ್ತೆಯ ಆರ್.ಕೆ.ಮಿನರಲ್ಸ್, ಯಶವಂತಪುರ ಮತ್ತು ಶ್ರೀಗಂಧ ಕಾವಲ್‌ನ ಎಂ.ಎಂ.ನ್ಯೂ ನಂದಿನಿ ಮಾರಾಟ ಕೇಂದ್ರಗಳ ಮೇಲೆ ದಾಳಿ ಮಾಡಿ ಸುಮಾರು 20 ಲೀಟರ್‌ನ 200 ಕ್ಯಾನ್‌ಗಳನ್ನು ವಶಪಡಿಸಿಕೊಂಡಿದ್ದಾರೆ. ಐಎಸ್‌ಐ ಮಾರ್ಕ್ ಇಲ್ಲದ ನೀರನ್ನು ಮಾರಾಟ ಮಾಡುವುದು ಕ್ರಿಮಿನಲ್ ಪ್ರಕರಣವಾಗಿದ್ದು, ಈ ರೀತಿಯ ಅಪರಾಧಕ್ಕೆ 2 ವರ್ಷಗಳ ವರೆಗೆ ಜೈಲು ಶಿಕ್ಷೆ ಜತೆಗೆ 5 ಲಕ್ಷ ರೂ. ದಂಡ ವಿಧಿಸಲು ಕಾನೂನಿನಲ್ಲಿ ಅವಕಾಶವಿದೆ. ಆದ್ದರಿಂದ ಈ ಬಗ್ಗೆ ಸಾರ್ವಜನಿಕರು ಎಚ್ಚರ ವಹಿಸಬೇಕು ಎಂದು ಬ್ಯೂರೋ ಆಫ್ ಇಂಡಿಯನ್ ಸ್ಟಾಂಡರ್ಡ್ಸ್ ಅಧಿಕಾರಿಗಳು ಕೋರಿದ್ದಾರೆ.

The indian news dt 20180526.jpg